ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಪೊಲೀಸ್ ಔಟ್‌ಪೋಸ್ಟ್ ನಿರ್ಮಾಣ

830 (819) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವನ ಬಾಗೇವಾಡಿ ತಾಲ್ಲೂಕಿನ ತೆಲಗಿ ಗ್ರಾಮಕ್ಕೆ ಪೊಲೀಸ್ ಔಟ್‌ಪೋಸ್ಟ್ ನಿರ್ಮಿಸುವುದು ಅವಶ್ಯವಿದ್ದು ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರಕಾರ ಕೈಗೊಂಡ ಕ್ರಮಗಳೇನು;

ಆ) ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿರುವ ಕೋಲ್ಹಾರ, ನಿಡಗುಂದಿ, ಆಲಮಟ್ಟಿ ಮತ್ತು ಮನಗೂಳಿ ಪೊಲೀಸ್ ಠಾಣೆಯ ಸಿಬ್ಬಂದಿಗೆ ಅನುಗುಣವಾಗಿ ವಸತಿ ಗೃಹಗಳನ್ನು ನಿರ್ಮಿಸುವ ಯೋಜನೆ ಸರಕಾರದ ಗಮನದಲ್ಲಿದೆಯೇ; ಹಾಗಿದ್ದಲ್ಲಿ ಸರಕಾರ ಕೈಕೊಂಡ ಕ್ರಮಗಳೇನು?

ಶ್ರೀ ಆರ್.ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು) :

ಅ) ಬಸವನ ಬಾಗೇವಾಡಿ ತಾಲ್ಲೂಕಿನ ತೆಲಗಿ ಗ್ರಾಮಕ್ಕೆ ಪೊಲೀಸ್ ಔಟ್ ಪೋಸ್ಟ್ ನಿರ್ಮಿಸುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ರಾಷ್ಟ್ರೀಯ ಪೊಲೀಸ್ ಆಯೋಗವು ಪೊಲೀಸ್ ಹೊರಠಾಣಾ ನಿರ್ಮಾಣದ ಬಗ್ಗೆ ಕೆಲವು ಮಾನದಂಡಗಳನ್ನು ಶಿಫಾರಸ್ಸು ಮಾಡಿದ್ದು, ಈ ಮಾನದಂಡಗಳ ಪರಿಧಿಯಲ್ಲಿ ಪ್ರಸ್ತಾವಿತ ಹೊರಠಾಣೆ ಬಾರದಿರುವ ಕಾರಣ ಇಲಾಖಾ ಹಂತದಲ್ಲಿಯೇ ಇದು ಪರಿಗಣಿಸಲ್ಪಡದೆ ಮುಕ್ತಾಯಗೊಳಿಸಲ್ಪಟ್ಟಿದೆ.

ಆ) ಬಸವನ ಬಾಗೇವಾಡಿ ತಾಲ್ಲೂಕಿನ ಕೋಲಾರ, ನಿಡಗುಂದಿ, ಆಲಮಟ್ಟಿ ಮತ್ತು ಮನಗೂಳಿ ಪೊಲೀಸ್ ಸಿಬ್ಬಂದಿ ಮಾತ್ರವಲ್ಲದೆ ಇಲಾಖೆಯ ಎಲ್ಲಾ ಸಿಬ್ಬಂದಿಗಳಿಗೆ ಅನುಗುಣವಾಗಿ ವಸತಿ ಗೃಹಗಳ ನಿರ್ಮಿಸುವ ಯೋಜನೆ ಸರ್ಕಾರದ ಗಮನದಲ್ಲಿದೆ.

ಕೋಲ್ಹಾರ ಠಾಣೆಯಲ್ಲಿ 43 ಸಿಬ್ಬಂದಿ ಬಲವಿದ್ದು, 8 ವಸತಿಗೃಹಗಳು ಲಭ್ಯವಿದೆ, ಮನಗೂಳಿಯಲ್ಲಿ 40 ಸಿಬ್ಬಂದಿ ಬಲಕ್ಕೆ 25 ವಸತಿ ಗೃಹಗಳು ಲಭ್ಯವಿದೆ. ನಿಡಗುಂಡಿ ಸಿಬ್ಬಂದಿ ಬಲ 60 ಮತ್ತು ಆಲಮಟ್ಟಿಯಲ್ಲಿ 26 ಸಿಬ್ಬಂದಿ ಬಲವಿದ್ದು ಇಲ್ಲಿ ವಸತಿಗೃಹಗಳು ಲಭ್ಯವಿರುವುದಿಲ್ಲ.

ಹಂತ ಹಂತವಾಗಿ ವಸತಿಗೃಹಗಳ ನಿರ್ಮಾಣ ಕೈಗೊಳ್ಳಲಾಗುತ್ತಿದ್ದು, ಈಗಾಗಲೇ ತ್ವರಿತ ವಸತಿ ಯೋಜನೆ-1 ರಲ್ಲಿ 5056 ವಸತಿ ಗೃಹಗಳು, ತ್ವರಿತ ವಸತಿಯೋಜನೆ-2 ರಲ್ಲಿ 5003 ವಸತಿಗೃಹಗಳು ನಿರ್ಮಾಣಗೊಂಡಿದ್ದು,

ಪ್ರಸ್ತುತ ತ್ವರಿತ ವಸತಿ ಯೋಜನೆ–3 ಜಾಲ್ತಿಯಲ್ಲಿದ್ದು, ಈ ಯೋಜನೆಯಲ್ಲಿ ರಾಜ್ಯಾದ್ಯಂತ 6000 ವಸತಿಗೃಹಗಳನ್ನು ರೂ.440.00 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ನಂತರದಲ್ಲಿ ನಿರ್ಮಾಣ ವೆಚ್ಚ ಹೆಚ್ಚಳವಾದ ಕಾರಣ ನಿರ್ಮಿಸಬೇಕಾದ ವಸತಿಗೃಹಗಳ ಸಂಖ್ಯೆಯನ್ನು 4333ಕ್ಕೆ ಕಡಿತಗೊಳಿಸಿ ಈಗಾಗಲೇ ಟೆಂಡರ್ ಕರೆದ ರೂ.220.00 ಕೋಟಿಗೆ ಯೋಜನಾ ವೆಚ್ಚವನ್ನು ಸೀಮಿತಗೊಳಿಸಿದೆ. ಈ ಹಂತದಲ್ಲಿ ಕೋಲ್ಹಾರ, ನಿಡಗುಂದಿ, ಆಲಮಟ್ಟಿ ಮತ್ತು ಮನಗೂಳಿ ಪೊಲೀಸ್ ಠಾಣಾ ಸಿಬ್ಬಂದಿಗಳ ವಸತಿಗೃಹ ನಿರ್ಮಾಣ ಕಾಮಗಾರಿಯನ್ನು ಸೇರ್ಪಡೆಗೊಳಿಸಲು ಸಾಧ್ಯವಿರುವುದಿಲ್ಲ. ಈ ಯೋಜನೆಯಲ್ಲಿ ಈಗಾಗಲೇ 2051 ವಸತಿಗೃಹಗಳನ್ನು ನಿರ್ಮಿಸಲಾಗಿದೆ.

ಇಲಾಖಾ ಹಂತದಲ್ಲಿ ತ್ವರಿತ ವಸತಿ ಯೋಜನೆ–4ನ್ನು ಸಿದ್ಧಪಡಿಸಲಾಗುತ್ತಿದ್ದು, ಈ ಯೋಜನೆಯಲ್ಲಿ ಪ್ರಸ್ತಾವಿತ ಪೊಲೀಸ್ ಠಾಣೆಗಳ ಸಿಬ್ಬಂದಿಗಳಿಗೆ ನಿವೇಶನ ಲಭ್ಯತೆ ಮೇಲೆ ವಸತಿಗೃಹಗಳ ನಿರ್ಮಾಣ ಕಾಮಗಾರಿಯನ್ನು ಸೇರ್ಪಡೆಗೊಳಿಸಲು ಪರಿಶೀಲಿಸಲಾಗುವುದು.

ರಾಜೀವ್ ಗಾಂಧಿ ವಸತಿ ನಿಗಮದಿಂದ 2010–11, 2011–12ನೇ ಸಾಲಿನಲ್ಲಿ ಮನೆ ನಿರ್ಮಾಣ ಮಾಡಿರುವುದು

831 (1053) ಶ್ರೀ ಚಂದ್ರಶೇಖರ್ ಕೆ.ಬಿ. (ಕೆ.ಆರ್.ಪೇಟೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ 2010–11 ಹಾಗೂ 2011–12ನೇ ಸಾಲಿನಲ್ಲಿ ನಿರ್ಮಾಣ ಮಾಡಿರುವ ಮನೆಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ಒದಗಿಸಲಾಗಿದೆಯೆ;

ಆ) ಹಾಗಿದ್ದಲ್ಲಿ, 2011–12ನೇ ಸಾಲಿನಲ್ಲಿ ಕಟ್ಟಿರುವ ಮನೆಗಳ ಸಂಖ್ಯೆ ಎಷ್ಟು, ಕಟ್ಟದೆ ಇರುವ ಮನೆಗಳ ಸಂಖ್ಯೆ ಎಷ್ಟು;

ಇ) 2010–11 ಮತ್ತು 2011–12ನೇ ಸಾಲಿನಲ್ಲಿ ಮಂಜೂರಾತಿಯಾಗಿದ್ದ ಮನೆಗಳನ್ನು ನಿರ್ಮಾಣ ಮಾಡದೆ ಇರಲು ಕಾರಣಗಳೇನು, ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?